ಮೂಲ ದಾವಾ ಃ 124-2011 ಪಿಡಬ್ಲು-1

ಸಾಕ್ಷಿಯನ್ನು ದಿನಾಂಕಃ 12-04-2018 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

ಮುಂದುವರೆದ ಪಾಟೀ ಸವಾಲು ಃ ಶ್ರೀ ಪಿ ಎಸ ಬಿ ವಕೀಲರಿಂದಃ

ನಾವು ಮನೆಯಲ್ಲಿ ಹೆಚ್ಚಾಗಿ ಉರ್ದು ಭಾಷೆ ಮಾತನಾಡುತ್ತೇವೆ ಅಂದರೆ ಸರಿ. ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಆದೇಶವನ್ನು ಯಾರಿಂದ ಯಾವ ದಿನಾಂಕದಂದು ಓದಿಸಿ ತಿಳಿದುಕೊಂಡಿದ್ದೇನೆಂದು ಹೇಳಲು ಬರುವುದಿಲ್ಲ. ನಮ್ಮ ಮನೆಯವರುಸದರಿ ಆದೇಶವನ್ನು ನನ್ನ ಗಂಡ ಉರ್ದು ಭಾಷ್ಷೆಯಲ್ಲಿ ಓದಿ ತಿಳಿಸಿರುತ್ತಾರೆ. ನನ್ನ ಗಂಡ ದ್ವಿತೀಯ ಪಿ ಯು ಸಿ ವಿದ್ಯಾಭ್ಯಾಸ ಮಾಡಿರುತ್ತಾರೆ. ಸರ್ವೆ ನಂ 268/1 ಕ್ಕೆಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ 3 ಎಕರೆ 24 ಗುಂಟೆಗೆ ತಕರಾರು ನಡೆದಿತ್ತು ಎಂದು ನನ್ನ ಗಂಡ ನನಗೆ ಓದಿ ಹೇಳಿದ್ದರೆ ಎಂಬ ಪ್ರಶ್ನೆಗೆ ಸಾಕ್ಷಿಯು 1 ಎಕರೆ ಭಕ್ಷೀಸು ಪತ್ರ ಮಾಡಿದ ಬಗ್ಗೆ ತಿಳಿಸಿದ್ದರು ಅಂತ ನುಡಿಯುತ್ತಾರೆ. ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ತಂಟೆ ಇದ್ದ ದಾವೆಯು ಮಾರಾಟವಾಗಿದೆ ಎಂಬ ಬಗ್ಗೆ ನನ್ನ ಗಂಡ 2006-07 ರಲ್ಲಿ ನನಗೆ ತಿಳಿಸಿ ಹೇಳಿಲ್ಲ. ಆಸಿ ್ತ ಮಾರಾಟವಾದ ನಂತರ ಖರೀದಿದಾರರ ಹೆಸರು ಉತಾರದಲ್ಲಿ ನಮೂದಾದ ಬಗ್ಗೆ ನನ್ನ ಗಂಡ ನನಗೆ ಓದಿ ತಿಳಿಸಿರಲಿಲ್ಲ.

ನಿಪಿ 3 ನಮಗೆ ಅಂಚೆ ಮೂಲಕ ಬಂದಿದೆ. ನಿಪಿ 3 ರ ಕೊನೆಯ ಪುಟದ ಹಿಂಭಾಗದಲ್ಲಿ ಬರೆದ ಅಕ್ಷರಗಳ ಬಗ್ಗೆ ನನಗೆ ತಿಳಿದಿಲ್ಲ. ಕಾರಣ ನನಗೆ ಇಂಗ್ಲೀಷ ಬರುವುದಿಲ್ಲ. ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಬೇಪಾರಿ ರವರು ಸಲ್ಲಿಸಿರುವ ಅಪೀಲು ಕಾಲ ಪರಿಮಿತಿಯಿಂದ ಬಾದಿತಗೊಂಡಿದ್ದು ಮತ್ತು ಖರೀದಿದಾರರ ಹೆಸರು ಈಗಾಗಲೇ ನಮೂದಾಗಿದೆ ಎಂದು ಅಪೀಲನ್ನು ವಜಾಗೊಳಿಸಲಾಗಿದೆ ಅಂತ ನನ್ನ ಗಂಡ ಓದಿ ಹೇಳಿಲ್ಲ. ನಿಪಿ 1 ರ ಕಾಲಂ ನಂ 11 ರಲ್ಲಿ ಋಣಭಾರಗಳು ದಾಖಲಿರುವ ಬಗ್ಗೆ ನಾನು ತಿಳಿದುಕೊಂಡಿಲ್ಲ. ದಾವೆ ಹೂಡುವ ಪೂರ್ವ ಜಮೀನುಗಳ ಉತಾರ ಹಾಗೂ ದಾಖಲೆಗಳನ್ನು ತೆಗೆಸಿ ನೋಡಿಲ್ಲ. ಆದರೆ ನನ್ನ ತಾಯಿಗೆ ಗೊತ್ತಿದೆ. ನಿಪಿ 1 ರಲ್ಲಿ ನಮೂದಾಗಿರುವ ಡ ನಮೂದುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೇನೂ ತೊಂದರೆ ಇಲ್ಲ.

ಇಬ್ರಾಹಿಂಸಾಬ್ ರವರ ತಂದೆ ರಾಜೇಸಾಬ್ ಯಾವಾಗ ತೀರಿಕೊಂಡಿದ್ದಾರೆಂದು ಗೊತ್ತಿಲ್ಲ. ಇಬ್ರಾಹಿಂಸಾಬ್ ಮತ್ತು ನನ್ನ ತಾಯಿ ಅವರ ಜೀವಿತ ಅವಧಿಯಲ್ಲಿ ಯಾವುದೇ ಬಿನ್ನಾಬಿಪ್ರಾಯಗಳು ಇರಲಿಲ್ಲ ಅಂದರೆ ಸರಿ. ನನ್ನ ತಂದೆ ಇಬ್ರಾಹಿಂಸಾಬ್ ಸಾಯುವ ಕಾಲಕ್ಕೆ ಭಾಗವಾನ್ ಗಲ್ಲಿ ಕಲಘಟಗಿಯಲ್ಲಿ ವಾಸ ಮಾಡುತ್ತಿದ್ದರು ಅಂದರೆ ಸರಿ. ನೂರ್ ಜಹಾನ್ ಅಂಜುಮನ್ ಆಸ್ಪತ್ರೆಯಲ್ಲಿ ತೀರಿಕೊಂಡರು ಅಂದರೆ ಸರಿ. ಅವರು ಸಾಯುವ ಪೂರ್ವ ಅಕ್ಕಿ ಓಣಿಯಲ್ಲಿದ್ದರು ಅಂದರೆ ಸರಿಯಲ್ಲ. ಅವರು ಭಾಗವಾನ್ ಓಣಿಯಲ್ಲಿದ್ದರು. ನೂರ್‌ಜಹಾನ್ ರವರು ಅಕ್ಕಿ ಓಣಿಯಲ್ಲಿದ್ದ ಕಾರಣ ಅವರ ಮರಣ ಉತಾರದಲ್ಲಿ ಮರಣ ಹೊಂದಿದ ಸ್ಥಳ ಅಕ್ಕಿ ಓಣಿ ಅಂತ ನಮೂದಾಗಿದೆ ಅಂದರೆ ಸಾಕ್ಷಿ ಭಾಗವಾನ್ ಓಣಿಯನ್ನು ಅಕ್ಕಿ ಓಣಿ ಅಂತ ಕರೆಯುತ್ತಾರೆಂದು ನುಡಿಯುತ್ತಾರೆ. ಅಕ್ಕಿ ಓಣಿ ಮತ್ತು ಭಾಗವಾನ್ ಓಣಿ ಒಂದೇ ಅಲ್ಲ ಅಂದರೆ ಸರಿಯಲ್ಲ.

ನನ್ನ ಆಧಾರ ಕಾರ್ಡ, ಚುನಾವಣಾ ಗುರುತಿನ ಚೀಟಿ, ಪಡಿತರ ಚೀಟಿಯಲ್ಲಿ ನನ್ನ ಮನೆ ವಿಳಾಸ ನಮೂದಾಗಿದೆ ಅಂದರೆ ಸರಿ. ನನ್ನ ವಾದಪತ್ರದಲ್ಲಿ ಹೇಳಿದಂತೆ ಕಲಘಟಗಿ ಗಾಂಧಿನಗರದಲ್ಲಿ ವಾಸ ಮಾಡುತ್ತಿರುವ ಬಗ್ಗೆ ಯಾವುದೇ ದಾಖಲೆಗಳನ್ನು ನೀಡಿಲ್ಲ. ನೂರ್ ಜಹಾನ್ ರವರಿಗೆ ತಾಹೀರಾಬೇಗಂ, ಸಾಯಿರಾ ಬಾನು(ನಾನು), ಶಬ್ಬೀರ್(ಮೃತ), ಮುಕ್ತುಂಬಿ(ಮೃತ), ಗೌಸ್‌ಬಿ, ಮಹಬೂಬ್‌ಅಲಿ ಅಂತ 6 ಒಟ್ಟು ಜನ ಮಕ್ಕಳು. ನನ್ನ ತಂದೆ ಇಬ್ರಾಹಿಂಸಾಬ್ ಮತ್ತು ನನ್ನ ತಾಯಿ ನೂರ್‌ಜಹಾನ್ ರವರು ತೀರಿಕೊಂಡ ನಂತರ ನಾನು ವಾರ್ಸಾಪತ್ರ ಪಡೆದಿದ್ದೇನೆ.

ತಹಶೀಲ್ದಾರ್ ಕಚೇರಿಯಲ್ಲಿ ಮೃತರ ಕುಟುಂಬದ ಜೀವಿತ ಸದಸ್ಯರ ಪತ್ರ ಮಾತ್ರ ಕೊಡುತ್ತಾರೆ, ವಾರ್ಸಾ ಪತ್ರ ಕೊಡುವುದಿಲ್ಲ ಅಂದರೆ ನನಗೆ ಗೊತ್ತಿಲ್ಲ.

ನನ್ನ ವಾದಪತ್ರದಲ್ಲಿ ಹೇಳಿರುವ ಹಾಗೆ 1996 ರಿಂದ ದಾವಾ ಆಸ್ತಿಯ ವಹಿವಾಟು ಮಾಡುತ್ತೇವೆಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ. ಆದರೆ ಆವತ್ತಿನಿಂದ ನಾವೇ ವಹಿವಾಟಿನಲ್ಲಿದ್ದೇವೆ ಅಂತ ನುಡಿಯುತ್ತಾರೆ. ನನ್ನ ಸಹೋದರ ಸಹೋದರಿಯರು ಈ ಹಿಂದೆ ನ್ಯಾಯಾಲಯಕ್ಕೆ ಬಂದಿದ್ದಾರೆ. ಆದರೆ ನಾನೇ ಜವಾಬ್ದಾರಿ ತೆಗೆದುಕೊಂಡು ಕೇಸು ಮುಂದುವರೆಸುತ್ತಿದ್ದೇನೆ. ವಾದಪತ್ರದಲ್ಲಿ ಅವರೆಲ್ಲರನ್ನು ದಾವೆಗೆ ಸೇರಿಸಿಲ್ಲ ಅಂದರೆ ಸರಿಯಲ್ಲ. ಸಾಮಾನ್ಯವಾಗಿ ಯಾವುದೇ ಆಸ್ತಿ ವರ್ಗಾವಣೆ ಮಾಡುವಾಗ ನೋಂದಾವಣೆ ಮೂಲಕ ಮಾಡಬೇಕು ಅಂದರೆ ಸರಿ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿರುವ ಹಾಗೆ ದಾವಾ ಆಸ್ತಿ ಸವೆ ನಂ 268/ಎ1 ಪಕ್ರುಸಾಬ್ ಮತ್ತು ಅವರ ತಾಯಿ ನಡುವೆ ಆದ ಕುಟುಂಬ ವ್ಯವಸ್ಥಾಪನಾ ಪತ್ರದ ಮೂಲಕ ಪಕ್ರುಸಾಬ್ ರವರ ಹೆಸರಿಗೆ ಬಂದಿರುವ ಬಗ್ಗೆ ನಾನು ಪತ್ರ ನೋಡಿದ್ದೇನೆ. ಈ ವಿಚಾರವನ್ನು ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಮಾತ್ರ ಉಲ್ಲೇಖಿಸಿದ್ದೇನೆ, ದಾವಾ ಪತ್ರದಲ್ಲಿ ಉಲ್ಲೇಖ ಮಾಡಿಲ್ಲ ಅಂದರೆ ಸರಿ.

ನನ್ನ ವಾದ ಪತ್ರದಲ್ಲಿ ಪ್ರತಿವಾದಿ 1, 2 ಹಾಗೂ ಅವರ ತಾಯಿ ರಾಜಬಿ ರುಸ್ತುಂ ಬೇಪಾರಿ ಅಂತ ನಾನು ಹೇಳಿ ಬರೆಸಿಲ್ಲ. ಅಸಲು ದಾವಾ ನಂ 77/11 ಮತ್ತು ಈ ಮೇಲಿನ ದಾವೆ ಒಟ್ಟಾಗಿ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿತ್ತು ಅಂತ ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಮಾತ್ರ ಬರೆಸಿದ್ದೇನೆ ವಾದ ಪತ್ರದಲ್ಲಿ ಹೇಳಿಲ್ಲ ಅಂದರೆ ಸರಿ. ದಾವಾ ಪೂರ್ವ ಪ್ರತಿವಾದಿ 1 ರವರ ವಿರುದ್ದ ಠಾಣೆಯಲ್ಲಿ ದೂರು ನೀಡಿದ್ದೇನೆ. ದೂರು ಕೊಟ್ಟ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ಸಾಕ್ಷಿ ಮುಂದುವರೆದು ನಾವು ದೂರು ನೀಡಿದ್ದು ಎಫ್ ಐ ಆರ್ ದಾಖಲು ಮಾಡಿಲ್ಲ ಅಲ್ಲೇ ಬಗೆಹರಿಸಿರುತ್ತಾರೆ. ನಾನು ದೂರು ಕೊಡದ ಕಾರಣ ಯಾವುದೇ ದಾಖಲೆ ನೀಡಿಲ್ಲ ಅಂದರೆ ಸರಿಯಲ್ಲ.

ಈ ದಾವೆ ದಾಖಲು ಮಾಡುವ ಪೂರ್ವ ಪ್ರತಿವಾದಿಯರಿಗೆ ನೋಟೀಸ್ ನೀಡಿಲ್ಲ. ದಿಃ 06.08.2006 ರಂದು ಪಕ್ರುಸಾಬ್ ತೀರಿಕೊಂಡಿದ್ದಾರೆಂದರೆ ಸಾಕ್ಷಿಯು 13-14 ವರ್ಷದ ಹಿಂದೆ ಮರಣ ಹೊಂದಿದ್ದು ದಿನಾಂಕ ಹೇಳಲ ಎಬರುವುದಿಲ್ಲ ಅಂತ ನುಡಿಯುತ್ತಾರೆ. ಪಕ್ರುಸಾಬ್ ಮರಣ ಉತಾರ ಪಡೆದಿದ್ದೇನೆ. ಸದರಿ ಪಕ್ರುಸಾಬ್ ರವರ ಮರಣ ಉತಾರವನ್ನು ಹಾಜರುಪಡಿಸುತ್ತೇನೆ. ಸರ್ವೆ ನಂ 268/ಅ1 ಆಸ್ತಿ ನನ್ನ ಸ್ವಾಧೀನದಲ್ಲಿದೆ ಅಂತ ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ. ಮಹಬೂಬ್‌ಸಾಬ್ ಮತ್ತು ಆಶಾಬಿ ರವರು ಪಕ್ರುಸಾಬ್ ಮರಣ ಹೊಂದುವ ಮೊದಲೇ ಮರಣ ಹೊಂದಿದ್ದಾರೆ. ಪಕ್ರುಸಾಬ್ ಹೆಂಡತಿ ಯಾರು, ಅವರ ಹೆಸರು ಹಾಗೂ ಅವರಿಗೆ ಎಷ್ಟು ಮಕ್ಕಳಿದ್ದರು ಅಂತ ನನಗೆ ಗೊತ್ತಿಲ್ಲ.

ಪ್ರತಿವಾದಿ 1 ರಾಜ್‌ಬಿ ರವರ ಮಗ. ಪ್ರತಿವಾದಿಯರ ತಕರಾರು ಏನಿದೆ ಅಂತ ಓದಿ ತಿಳಿದುಕೊಂಡಿಲ್ಲ. ಪಕ್ರುಸಾಬ್ ಮರಣ ಹೊಂದುವ ಪೂರ್ವ ಸೈಯದ್‌ಸಾಬ್ ರವರು ಪಕ್ರುಸಾಬ್‌ನ ಅಲ್ಪವಯಿ ಸಂರಕ್ಷಣದಾರರಾಗಿ ದಾವಾ ಆಸ್ತಿ 268/1 ನ್ನು ನೋಡಿಕೊಳ್ಳುತ್ತಿದ್ದ ವಿಚಾರ ನನಗೆ ಗೊತ್ತಿಲ್ಲ. ಪಕ್ರುಸಾಬ್ ಮತ್ತು ಅವರ ತಾಯಿ ಆಶಾಬಿ ರವರನ್ನು ನನ್ನ ತಾಯಿ ನೋಡಿಕೊಂಡಿದ್ದಾರೆ ಅಂತ ನನ್ನ ಪ್ರಮಾಣ ಪತ್ರದಲ್ಲಿ ಮಾತ್ರ ಹೇಳಿ ವಾದ ಪತ್ರದಲ್ಲಿ ಹೇಳಿಲ್ಲ ಅಂದರೆ ಸರಿಯಲ್ಲ. ಆಸ್ತಿ ಹೊಡೆಯುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ. ಪಕ್ರುಸಾಬ್ ವಾರಸುದಾರರು ಮತ್ತು ರಾಜಬೀ ಬೇಪಾರಿ ರವರ ವಾರಸುದಾರರು ಇವತ್ತಿಗೂ ದಾವಾ ಆಸ್ತಿ ವಹಿವಾಟು ಮಾಡುತ್ತಿದ್ದಾರೆಂದರೆ ಸರಿಯಲ್ಲ. ನಮ್ಮ ಮನೆಯಲ್ಲಿ ಚಕ್ಕಡಿ ಎತ್ತು ಹಾಗೂ ಶೇತ್ಕಿ ಮಾಡುವ ಸಲಕರಣೆಗಳಿಲ್ಲ. ಆದರೆ ಬಾಡಿಗೆ ತಂದು ಮಾಡಿಸುತ್ತೇವೆ. ಎಕರೆಗೆ ಎಷ್ಟು ಬಾಡಿಗೆ

ತೆಗೆದುಕೊಳ್ಳುತ್ತಾರೆಂದು ನನಗೆ ಗೊತ್ತಿಲ್ಲ. ನಮ್ಮ ಮನೆ ಗಂಡು ಮಕ್ಕಳು ಮಾಡಿಸುತ್ತಾರೆ. ನಮ್ಮ ಮನೆ ಗಂಡು ಮಕ್ಕಳು ಶೇತ್ಕಿ ಮಾಡಿಸುವುದಿಲ್ಲ ಅಂದರೆ ಸರಿಯಲ್ಲ.

ದಾವಾ ಜಮೀನು ಪಡಾ ಇದೆ ಅಂದರೆ ಸರಿಯಲ್ಲ. ಮೊದಲು ಗೊಂಜಾಳ ಹಾಕಿದ್ದೆವು ಈಗ ಪಡಾ ಬಿದ್ದಿವೆ ಅಂತ ನುಡಿಯುತ್ತಾರೆ. ನಮ್ಮ ಪರವಾಗಿ ಸಾಕ್ಷಿ ನುಡಿದ ರಾಮು ತಹಶೀಲ್ದಾರ್‌ರವರು ಈ ಹಿಂದೆ ಸಾಕ್ಷ್ಯ ಪ್ರಮಾಣ ಪತ್ರ ಸಲ್ಲಿಸುವಾಗ ನನ್ನ ತಮ್ಮ ದಾವಾ ಆಸ್ತಿ ಉಳುಮೆ ಮಾಡುತ್ತಾರೆಂದರೆ ಸಾಕ್ಷಿಯು ರಾಮು ರವರ ತಮ್ಮನ ಮೂಲಕ ಉಳುಮೆ ಮಾಡುತ್ತಾರೆ ಅಂತ ನುಡಿಯುತ್ತಾರೆ. ದಾವಾ ಆಸ್ತಿಯನ್ನು ರಾಮು ತಮ್ಮ ಉಳುಮೆ ಮಾಡುತ್ತಿರುವ ಬಗ್ಗೆ ರಾಮು ತಮ್ಮನ ಸಾಕ್ಷ್ಯ ಮಾಡಿಸಿಲ್ಲ. ಆದರೆ ನಾವು ರಾಮುವಿಗೆ ಕೊಟ್ಟಿದ್ದೇವೆ ಅವರು ಅವರ ತಮ್ಮನ ಮೂಲಕ ಉಳುಮೆ ಮಾಡುತ್ತಾರೆ. ಇವತ್ತಿನವರೆಗೂ ದಾವಾ ಆಸ್ತಿ ಕರಪಾವತಿ ಪ್ರತಿವಾದಿಯರು ಮಾಡುತ್ತಿದ್ದಾರೆಂದರೆ ಸರಿಯಲ್ಲ. ಆ ರೀತಿಯಾಗಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

(ಮರು ವಿಚಾರಣೆ ಇಲ್ಲ)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಅದೆ,

ಸಹಿ/-

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ